**ಚಾಸಾ- 1 ಪ್ರಾಸಾ-1**

**3ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,**
**ಬೆಂಗಳೂರು ನಗರ.**
**ಸಿಸಿ. 6154/2020**

| | |
|---|---|
| **ಸಾಕ್ಷಿದಾರರ ಹೆಸರು** | ಮಂಜುನಾಥ. |
| **ತಂದೆಯ ಹೆಸರು** | ಲೇಟ್.ಪುಟ್ಟ ಸ್ವಾಮಿ. |
| **ವಯಸ್ಸು** | 59 ವರ್ಷ |
| **ಉದ್ಯೋಗ** | ವ್ಯವಸ್ಥಾಪಕರ ನಿರ್ದೇಶಕರು, ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಸಹಾಕರ ಬ್ಯಾಂಕ್, ಬಸವನಗುಡಿ. |
| **ವಾಸ** | ಬನಶಂಕರಿ 1ನೇ ಹಂತ, ಬೆಂಗಳೂರು. |
| **ಪ್ರಮಾಣೀಕರಿಸಿದ ದಿನಾಂಕ** | 16.02.2026. |

**ಮುಖ್ಯ ವಿಚಾರಣೆ : ಹಿ.ಸ ಸ. ಅಭಿಯೋಜಕರವರಿಂದ :**

ನಾನು 2014 ರಿಂದ 2022 ವರೆಗೆ ಸಹಕಾರ ಸಂಘಗಳ ಸಹಾಯಕ ನಿಬಂಧಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ನನಗೆ ಈ ಪ್ರಕರಣದ ಆರೋಪಿತರು ಗೊತ್ತು. ಅದೇ ರೀತಿ ನನಗೆ ಚಾಸಾ-2 ರಿಂದ 7 ರವರು ಗೊತ್ತು. ಉದಯ್ ಎಜುಕೇಷನ್ ಸೊಸೈಟಿಗೆ ನನ್ನನ್ನು ಆಡಳಿತಾಧಿಕಾರಿಯಾಗಿ ಕರ್ನಾಟಕ ಸರ್ಕಾರ ನೇಮಕಾತಿ ಮಾಡಿತ್ತು. ಉದಯ್ ಎಜುಕೇಷನ್ ಟ್ರಸ್ಟ್ ಆರ್.ಟಿ.ನಗರದಲ್ಲಿತ್ತು. ಒಂದು ಮತ್ತು ಎರಡನೇ ಆರೋಪಿತರು ಸದರಿ ವಿದ್ಯಾ ಸಂಸ್ಥೆಯ ಪದಾಧಿಕಾರಿಗಳಾಗಿದ್ದರು. ಶ್ರೀ.ಉದಯ ವಿದ್ಯಾಕೇಂದ್ರದಲ್ಲಿ ರೂ.1,68,78,374/- ಹಣದ ದುರುಪಯೋಗವಾಗಿದೆ ಎಂದು ಕರ್ನಾಟಕ ಸಹಕಾರ ಸಂಘಗಳ ನೊಂದಣಿ ಅಧಿನಿಯಮ -1960 ಕಲಂ.25 ರ ಪ್ರಕಾರ ವಿಚಾರಣೆ ನಡೆದು ಚಾಸಾ-4ರವರನ್ನು ವಿಚಾರಣಾಧಿಕಾರಿಯಾಗಿ ನೇಮಕಾತಿ ಮಾಡಿಲಾಗಿತ್ತು. ಸದರಿ ಅವರು ಸಲ್ಲಿಸಿದ ವಿಚಾರಣಾ ವರದಿಯಲ್ಲಿ ಸದರಿ ವಿದ್ಯಾ ಸಂಸ್ಥೆಯಲ್ಲಿ ಹಣದ ದುರುಪಯೋಗವಾಗಿದೆ ಎಂದು ಸಲ್ಲಿಸಿದ್ದರು. ಸದರಿ ವರದಿಯನ್ನು ಆಧಾರಿಸಿ ನಮ್ಮ ಇಲಾಖೆಯ ಉಪ ನಿಬಂಧಕರು ಆಡಳಿತಾಧಿಕಾರಿ ಯಾಗಿದ್ದ ನನಗೆ ನಿರ್ದೇಶನವನ್ನು ನೀಡಿ ಸಂಬಂಧಿದ ವ್ಯಕ್ತಿಗಳ ವಿರುದ್ಧ ಸಿವಿಲ್ ಮತ್ತು ಕ್ರಿಮಿನಲ್ ಕೇಸುಗಳನ್ನು ದಾಖಲು ಮಾಡಲು ಮತ್ತು ಪೊಲೀಸ್ ಠಾಣೆಯಲ್ಲಿ ದೂರು ನೀಡಲು ನಿರ್ದೇಶನ ನೀಡಲಾಗಿತ್ತು. ಆ ನಿರ್ದೇಶನವನ್ನು ಉಲ್ಲೇಖಿಸಿ ನಮ್ಮ ಕಾರ್ಯ ವ್ಯಾಪ್ತಿಗೆ ಒಳಪಡುವ ಪೊಲೀಸ್

ಠಾಣೆಗೆ ದೂರನ್ನು ದಾಖಲು ಮಾಡಿರುತ್ತೇನೆ. ಸಾಕ್ಷಿಯು ದೂರಿನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು. ಸದರಿ ದೂರನ್ನು ನಿಪಿ.1 ಎಂದು, ಸಾಕ್ಷಿ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು. ದೂರನ್ನು ದಿ.20.05.2019ರಂದು ಸುಮಾರು 11 ರಿಂದ 12 ಗಂಟೆ ಒಳಗೆ ನೀಡಿರುತ್ತೇನೆ. ಅದೇ ರೀತಿ ಪೊಲೀಸರು ಕೃತ್ಯ ನಡೆದ ಸ್ಥಳಕ್ಕೆ ಬಂದು ಪಂಚನಾಮೆಯನ್ನು ಜರುಗಿಸಿರುತ್ತಾರೆ. ಸದರಿ ಪಂಚನಾಮೆಯನ್ನು ಮಧ್ಯಾಹ್ನ 01.00 ರಿಂದ 02.30 ಗಂಟೆಗೆವರೆಗೆ ಜರುಗಿಸಿರುತ್ತಾರೆ. ಆ ಸಮಯದಲ್ಲಿ ನನ್ನ ಜೊತೆ ಇಬ್ಬರು ವ್ಯಕ್ತಿಗಳು ಪಂಚನಾಮೆಗೆ ಸಹಿ ಹಾಕಿದ್ದರು. ಸದರಿ ಇಬ್ಬರು ವ್ಯಕ್ತಿಗಳ ಹೆಸರುಗಳು ನನಗೆ ಈಗ ಮರೆತು ಹೋಗಿರುತ್ತದೆ. ನಾನು ಈಗ ನೋಡುತ್ತಿರುವ ದಾಖಲೆ ಮಹಜರ್ ಆಗಿದ್ದು, ಅದರ ಮೇಲೆ ನನ್ನ ಸಹಿ ಇರುತ್ತದೆ. ಸದರಿ ದಾಖಲೆ ಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ.2 ಎಂದು, ಸಾಕ್ಷಿ ಸಹಿಯನ್ನು ನಿಪಿ.2(ಎ) ಎಂದು ಗುರುತಿಸಲಾಯಿತು. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿತರು ಈ ದಿನ ಗೈರು ಹಾಜರಿದ್ದು ಅವರ ಪರ ವಕೀಲರು ಗುರುತಿಸುವಿಕೆಗೆ ಯಾವುದೇ ತಕರಾರು ಇಲ್ಲ ಎಂದು ಹೇಳಿರುತ್ತಾರೆ.

**ಪಾಟೀ ಸವಾಲು : ಶ್ರೀ.ಆರ್ ಆರ್ ಎಂ ಆರೋಪಿತರ ಪರ ವಕೀಲರಿಂದ**

ನಾನು ದಿ.18.05.2019 ರ ಪೂರ್ವದಲ್ಲಿ ಸಹಾಯಕ ನಿಬಂಧಕರಾಗಿ ಕಾರ್ಯವನ್ನು ನಿರ್ವಹಿ ಸುತ್ತಿದ್ದೆ. ದಿ.04.05.2018 ರಂದು ನನ್ನನ್ನು ಆಡಳಿತಾಧಿಕಾರಿಯಾಗಿ ನೇಮಕಾತಿ ಮಾಡಿದ ನಂತರ ಈ ಪ್ರಕರಣದ ಆರೋಪಿತರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ತಡೆಯಾಜ್ಞೆಯನ್ನು ತಂದಿರುತ್ತಾರೆ ಎಂದರೆ ಸರಿ. ಸದರಿ ತಡೆಯಾಜ್ಞೆ ನಂ.20332/2018 ಎಂದರೆ ಸರಿ. ಅದೇ ರೀತಿ ಸರ್ಕಾರಕ್ಕೆ ಸದರಿ ತಡೆಯಾಜ್ಞೆಯನ್ನು ತೆರೆವುಗೊಳಿಸಲು ಕಾಲಮಿತಿಯನ್ನು ಕೊಟ್ಟಿದ್ದರು. ಸದರಿ ರಿಟ್ ಅರ್ಜಿಯಲ್ಲಿ ನಾನು ಸಹ ಪ್ರತಿವಾದಿಯಾಗಿದ್ದೆ ಎಂದರೆ ಸರಿ. ನನಗೆ ತಿಳಿದ ಮಾಹಿತಿ ಪ್ರಕಾರ ಸದರಿ ಆದೇಶದ ವಿರುದ್ಧ ತಕರಾರನ್ನು ಸಲ್ಲಿಸಿದ್ದೇವು. ಸರ್ಕಾರಿ ವಕೀಲರ ಮೂಲಕ ತಕರಾರನ್ನು ಸಲ್ಲಿಸಿದ್ದೇವು. ಆದರೆ ದಿನಾಂಕ ನನಗೆ ನೆನಪಿಲ್ಲ. ನಾನು ಮಾನ್ಯ ಉಚ್ಚ ನ್ಯಾಯಾಲಯದ ಆದೇಶವನ್ನು ಉಲ್ಲಂಘನೆ ಮಾಡಿ ನಾನು ಸದರಿ ಕಾಲೇಜಿನಲ್ಲಿ ಆಡಳಿತಾಧಿಕಾರಿಯಾಗಿ ಕೆಲಸ ಮಾಡಲು ಹೋಗಿದ್ದೆ ಎಂದರೆ ಸರಿಯಲ್ಲ. ನಾನು

**ಚಾಸಾ- 1 ಪ್ರಾಸಾ-1**

ಸದರಿ ಆದೇಶವನ್ನು ಉಲ್ಲಂಘನೆ ಮಾಡಿ ಕಾಲೇಜಿನ ಒಳಗೆ ಹೋದಾಗ ಒಂದು ಮತ್ತು ಎರಡನೇ ಆರೋಪಿತರು ನನ್ನನ್ನು ತಡೆದಿದ್ದರೂ ಸಹ ನಾನು ಅವರೊಂದಿಗೆ ಅನುಚಿತವಾಗಿ ವರ್ತಿಸಿದ ಕಾರಣ ಆರೋಪಿತರು ನನ್ನ ಮೇಲೆ ಕ್ರಿಮಿನಲ್ ಪ್ರಕರಣವನ್ನು ದಾಖಲು ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ವಿರುದ್ದ ಪ್ರ.ವ.ವರದಿಯಾಗಿರುವುದು ನನಗೆ ಮಾಹಿತಿ ಇಲ್ಲ. ನನ್ನನ್ನು ಪೊಲೀಸರು ವಿಚಾರಣೆ ಮಾಡಿರುವುದು ನನಗೆ ನೆನಪಿಲ್ಲ. ಸದರಿ ಕಾಲೇಜಿನಲ್ಲಿ ನಾನು ಆಡಳಿತಾಧಿಕಾರಿಯಾಗಿ ಕೆಲಸ ಮಾಡುವ ಉದ್ದೇಶದಿಂದ ಆರೋಪಿತರು ಮತ್ತು ಕಾಲೇಜಿನಲ್ಲಿ ಕೆಲಸ ಮಾಡುತ್ತಿದ್ದ ಸಿಬ್ಬಂದಿಗಳ ಮೇಲೆ ಹಲವಾರು ಕ್ರಿಮಿನಲ್ ಪ್ರಕರಣಗಳನ್ನು ದಾಖಲು ಮಾಡಿರುತ್ತೇನೆ ಎಂದರೆ ಸಾಕ್ಷಿಯು ನಾನು ಮೇಲಾಧಿಕಾರಿ ಮತ್ತು ಸರ್ಕಾರದ ಆದೇಶದನ್ವಯ ಕೆಲಸ ಮಾಡಿರುತ್ತೇನೆ ಹೊರತು ಅದನ್ನು ಬೇರೆ ಏನು ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ದೂರುಗಳಲ್ಲಿ ನಾನು ಮೇಲಾಧಿಕಾರಿಗಳ ಆದೇಶದ ಅನ್ವಯ ದೂರು ದಾಖಲು ಮಾಡಿರುತ್ತೇನೆ ಎಂದು ಹೇಳಿರುವುದಿಲ್ಲ ಎಂದರೆ ಸಾಕ್ಷಿಯು ನನಗೆ ಈಗ ನೆನಪಿಲ್ಲ ಎಂದು ಹೇಳುತ್ತಾರೆ. ಯಾವುದೇ ಸರ್ಕಾರದ ಅಥವಾ ಮೇಲಾಧಿಕಾರಿಗಳ ಅನುಮತಿ ಇಲ್ಲದೇ ಇದ್ದರೂ ಸಹ ಅನಿತಾ ಪ್ರಸಾದ್ ರವರ ಕುಮ್ಮಕಿನಿಂದ ಆರೋಪಿತರ ವಿರುದ್ದ ಸುಳ್ಳು ಕೇಸು ದಾಖಲು ಮಾಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಹಕಾರ ಸಂಘಗಳ ಉಪ ನಿಬಂಧಕರು, ಬೆಂಗಳೂರು ವಲಯ-1 ರವರು ನನಗೆ ದೂರು ದಾಖಲು ಮಾಡಲು ನಿರ್ದೇಶನವನ್ನು ನೀಡಿರುತ್ತಾರೆ. ನನಗೆ ನಿಬಂಧಕರು ಯಾವುದೇ ಆದೇಶವನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ದೂರಿನಲ್ಲಿ ಆ ಬಗ್ಗೆ ತಿಳಿಸಿಲ್ಲ ಎಂದರೆ ಸರಿಯಲ್ಲ. ಮೇಲಾಧಿಕಾರಿಗಳು ನೀಡಿರುವ ಯಾವುದೇ ಆದೇಶವನ್ನು ನಾನು ಪೊಲೀಸರಿಗೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಮಹಜರ್ ಸಂದರ್ಭದಲ್ಲಿ ಸದರಿ ಮೇಲಾಧಿಕಾರಿಗಳ ಆದೇಶವನ್ನು ಪೊಲೀಸರು ಪಡೆದಿರುವ ಬಗ್ಗೆ ನನಗೆ ನೆನಪಿಲ್ಲ. ಸದರಿ ವಿದ್ಯಾ ಸಂಸ್ಥೆಯಲ್ಲಿ ರೂ.1,68,78,374/-ಗಳು ದುರುಪಯೋಗವಾಗಿರುವ ಬಗ್ಗೆ ನಾನು ಯಾವುದೇ ದಾಖಲೆಗಳನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ವಿಚಾರವನ್ನು ನಾನು ದೂರಿನಲ್ಲಿ ನಮೂದು ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

**ಚಾಸಾ- 1 ಪ್ರಾಸಾ-1**

**<u>ಮುಂದುವರೆದ ಪಾಟೀಸವಾಲಿಗೆ ಸಮಯಾವಕಾಶ ಕೋರಿದ್ದರಿಂದ  ಮುಂದೂಡಲಾಯಿತು.</u>**

<u>(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)</u>

**ಓ.ಹೇ.ಕೇ.ಸ.ಇದೆ**

**3ನೇ ಎ.ಸಿ.ಜೆ.ಎಮ್.ನ್ಯಾ.**
**ಬೆಂಗಳೂರು.**